ದಿನಾಂಕ 17.11.2020 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು 6ನೇ ಆರೋಪಿ ಪರ ಶ್ರೀ ಎಸ್ ವೈ ವಕೀಲರಿಂದಃ**

( ಶ್ರೀ ಎಸ್ ವೈ ವಕಿಲರು, ಸದರಿ ಸಾಕ್ಷೀದಾರನಿಗೆ 2ನೇ ಆರೋಪಿ ಪರ ವಕೀಲರು, ಮಾಡಿರುವ ಪಾಟೀ ಸವಾಲಿನಂತೆ 6ನೇ ಆರೊಪಿ ಪರ ಮಾಡಿದ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ.)

**ಮರು ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ-**

ದಾಬಸ್‌ಪೇಟೆಯಲ್ಲಿನ ಹೆಚ್ ಡಿ ಎಫ್ ಸಿ ಬ್ಯಾಂಕಿನ ಎಟಿಎಂನಲ್ಲಿ ಆರೋಪಿ ಹಣ ಡ್ರಾ ಮಾಡಿಕೊಂಡ ಬಗೆಗೆ ಸದರಿ ಬ್ಯಾಂಕಿನಿಂದ ಸಿ ಸಿ ಟಿ ವಿ ಫೂಟೇಜ್‌ನ ಸೀಡಿಯನ್ನು ಪಡೆದುಕೊಂಡು ಪ್ರಕರಣಕ್ಕೆ ಅಳವಡಿಸಿಕೊಂಡಿದ್ದು ಅದನ್ನು ಮುಂದಿನ ತನಿಖಾಧಿಕಾರಿಗಳಿಗೆ ವರ್ಗಾಯಿಸಿರುತ್ತೇನೆ.

**ಮರು ಪಾಟೀ ಸವಾಲು 1ನೇ ಆರೋಪಿ ಪರ ಶ್ರೀ ಎಂ ಬಿ ಎಸ್ ವಕೀಲರಿಂದ ಃ**

ಹೆಚ್ ಡಿ ಎಫ್ ಸಿ ಬ್ಯಾಂಕಿನ ಎಟಿಎಂಗೆ ಸಂಬಂಧಪಟ್ಟ ಸಿ ಸಿ ಟಿ ವಿ ಫೂಟೇಜ್ ಸಂಬಂಧಪಟ್ಟ ಬ್ಯಾಂಕಿನಿಂದ ಪಡದುಕೊಂಡ ಬಗೆಗೆ ಮಹಜರ್ ಮಾಡಿಲ್ಲ, ಸಿ ಸಿ ಟಿ ವಿ ಫೂಟೇಜ್‌ನ ಸೀಡಿಗೆ ಸಂಬಂಧಪಟ್ಟಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 (ಬಿ)ದ್ದರ ಅಡಿ ಪ್ರಮಾಣ ಪತ್ರ ಪಡೆದಿಲ್ಲ.

ಸಿ ಸಿ ಟಿ ವಿ ಫೂಟೇಜ್‌ನ ಸೀಡಿ ಹಾಜರುಪಡಿಸಿದ ಬ್ಯಾಂಕಿನ ಸಿಬ್ಬಂದಿಯ ಹೇಳಿಕೆಯನ್ನು ನಾನು ಪಡೆದುಕೊಂಡಿಲ್ಲ. ಈ ಪ್ರಕರಣಕ್ಕೂ ಹಾಗೂ ನಾನು ಹಾಜರುಪಡಿಸಿರುವ ಸೀಡೀಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಸದರಿ ಸೀಡಿಯನ್ನು ಸುಳ್ಳು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಆರೋಪಿತರ ಪರ ವಕೀಲರು1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುವುದಾಗಿ ವಿನಂತಿಸಿರುತ್ತಾರೆ.)

ಏನೂ ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು